**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಉತ್ತರ**

**ಪ್ರಶ್ನೆ:**

ರಾಜ್ಯದಲ್ಲಿ ಕೋವಿಡ್ ಸಂದರ್ಭದಲ್ಲಿ ಸಾವನ್ನಪ್ಪಿದ ಸಾರಿಗೆ ಸಂಸ್ಥೆಯ ಉದ್ಯೋಗಿಗಳಿಗೆ ಪಾವತಿಸಲು ನಿರ್ಣಯಿಸಲಾಗಿದ್ದ ಪರಿಹಾರ ಹಣದ ಮೊತ್ತವನ್ನು ಆ ಸಂದರ್ಭದಲ್ಲಿ ಸಾವನ್ನಪ್ಪಿದ ಬಹುತೇಕ ಉದ್ಯೋಗಿಗಳ ಅವಲಂಭಿತರಿಗೆ ಇನ್ನೂ ಪಾವತಿಸಿಲ್ಲ ಎಂಬುವುದು ಸಂಸ್ಥೆಯ ಕ್ರೌರ್ಯತೆ ಮತ್ತು ಮಾನವೀಯತೆ ಸಂವೇದನೆಯನ್ನೇ ಮರೆತಿರುವ ನಡವಳಿಕೆಗೆ ಜೀವಂತ ಸಾಕ್ಷಿಯಾಗಿದೆ. ಕೋವಿಡ್ ಸಂದರ್ಭದಲ್ಲಿ ಸಾವನ್ನಪಿದ ಸಾರಿಗೆ ಸಂಸ್ಥೆಯ ಬಹುತೇಕ ಉದ್ಯೋಗಿಗಳ ಅವಲಂಭಿತರು ತಮಗೆ ಸಿಗಬೇಕಾಗಿದ್ದ ಪರಿಹಾರ ಹಣದ ಮೊತ್ತವನ್ನು ಇನ್ನೂ ಪಾವತಿಸಿಲ್ಲ ಎಂದು ಕೋರ್ಟ್ ಮೆಟ್ಟಿಲೇರಿರುವುದು ವ್ಯವಸ್ಥೆಯ ಜಡತ್ವದ ಅಗಾಧತೆಯನ್ನು ಎತ್ತಿ ತೋರಿಸುತ್ತದೆ.

ಕೋವಿಡ್ ಸಂದರ್ಭದಲ್ಲಿ ಸಾವನ್ನಪ್ಪಿದ ಎಲ್ಲಾ ಸಾರಿಗೆ ಸಂಸ್ಥೆ ಉದ್ಯೋಗಿಗಳಿಗೆ ಈಗಾಗಲೇ ಪಾವತಿಸಲು ನಿರ್ಣಯಿಸಲಾಗಿದ್ದಂತೆ, ಪೂರ್ಣ ಪ್ರಮಾಣದಲ್ಲಿ ಪರಿಹಾರ ಹಣದ ಮೊತ್ತವನ್ನು ಇದುವರೆಗೆ ಪಾವತಿಸದೆ ಇರುವುದರಿಂದ ಆ ಕುಟುಂಬಗಳಿಗೆ ಆಗಿರುವ ಆರ್ಥಿಕ ಸಂಕಷ್ಟವನ್ನು ಪರಿಹರಿಸಲು ಸರ್ಕಾರ ಇದುವರೆಗೆ ಯಾವುದೇ ಅವಶ್ಯ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:**

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆ/ನಿಗಮಗಳಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಒಟ್ಟು 356 ನೌಕರರು ಮೃತಪಟ್ಟಿದ್ದು, ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ.

| ಕ್ರ. ಸಂಖ್ಯೆ | ನಿಗಮ/ಸಂಸ್ಥೆ | ಮೃತಪಟ್ಟ ಸಿಬ್ಬಂದಿಗಳ ಸಂಖ್ಯೆ |
|---|---|---|
| 1 | ಕ.ರಾ.ರ.ಸಾ.ನಿಗಮ | 98 |
| 2 | ಬೆಂ.ಮ.ಸಾ.ಸಂಸ್ಥೆ | 110 |
| 3 | ವಾ.ಕ.ರ.ಸಾ.ಸಂಸ್ಥೆ | 81 |
| 4 | ಕ.ಕ.ರ.ಸಾ.ನಿಗಮ | 67 |
| **ಒಟ್ಟು** | | **356** |

ಸರ್ಕಾರದ ಆದೇಶ ಸಂಖ್ಯೆ:ಆಇ:114:ವೆಚ್ಚ 11/2020 ದಿನಾಂಕ:02.05.2020 ರಲ್ಲಿ ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕರು, ಪೋಲಿಸ್ ಅಧಿಕಾರಿಗಳು/ ಸಿಬ್ಬಂದಿ, ಹೋಮ್ ಗಾರ್ಡ್ ಗಳನ್ನು, ಪೌರರಕ್ಷಣಾ ದಳ, ಅಗ್ನಿಶಾಮಕ ದಳದ ನೌಕರರು/ ಅಧಿಕಾರಿಗಳು ಬಂದೀಖಾನೆ ಸಿಬ್ಬಂದಿಗಳು, ಪೌರಕಾರ್ಮಿಕರು/ ಸ್ಯಾನಿಟೈಸರ್ ಕೆಲಸಗಾರರು, ಅವರಿಗೆ ಸಂಬಂಧಿಸಿದ ವಾಹನಗಳ ಚಾಲಕರು/ ಲೋಡರ್ ಗಳನ್ನು ಮಾತ್ರ **ಕೋವಿಡ್ ವಾರಿಯರ್** ಎಂದು ಪರಿಗಣಿಸಿ ಆದೇಶಿಸಲಾಗಿತ್ತು.

ಕರಾರಸಾ ನಿಗಮದ ಮಂಡಳಿ ಸಭೆಯ ಠರಾವು ಸಂಖ್ಯೆ:10195/44 ದಿನಾಂಕ:20.05.2020ರ ನಿರ್ಣಯದಂತೆ ದಿನಾಂಕ:19-05-2020 ರಿಂದ 31.12.2020 ರ ಅವಧಿಯಲ್ಲಿ ಮೃತಪಟ್ಟ ನೌಕರರಿಗೆ ಮಾತ್ರ ಪರಿಹಾರವನ್ನು ವಿತರಿಸಲು ಹಾಗೂ ಈ ಅವಧಿಯಲ್ಲಿ ಮೃತಪಟ್ಟವರ ಪ್ರಕರಣಗಳಿಗೆ ಸರ್ಕಾರದ ವತಿಯಿಂದ ತಲಾ ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿ ದಿನಾಂಕ:01.06.2020 ರಂದು ಕ.ರಾ.ರ.ಸಾ.ನಿಗಮವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

ಪ್ರಸ್ತಾವನೆಯ ಕುರಿತು ಸರ್ಕಾರದ ಪತ್ರ ಸಂಖ್ಯೆ:ಟಿಡಿ 08 ಟಿಸಿಬಿ 2020, ದಿನಾಂಕ:07.07.2020ರ ಪತ್ರದಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ನಿಧನರಾದ ನೌಕರರ ಅವಲಂಭಿತರಿಗೆ ರೂ.30.00 ಲಕ್ಷಗಳ ಪರಿಹಾರವನ್ನು ತಮ್ಮ ಆಂತರಿಕ ಸಂಪನ್ಮೂಲದಿಂದ ಮಂಜೂರು ಮಾಡುವ ಕುರಿತು ಕರಾರಸಾ ನಿಗಮದ ಮಂಡಳಿ ಸಭೆಯಲ್ಲಿ ಮಂಡಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವಂತೆ ತಿಳಿಸಲಾಗಿತ್ತು. ಆದರೆ, ಆಗಿನ ಆಡಳಿತ ಮಂಡಳಿಯು ಸಂಪನ್ಮೂಲಗಳ ಕೊರತೆಯಿಂದಾಗಿ ಯಾವುದೇ ಸ್ಪಷ್ಟವಾದ ತೀರ್ಮಾನ ತೆಗೆದುಕೊಂಡಿರುವುದಿಲ್ಲ.

**ಆದರೆ ಸರ್ಕಾರದಿಂದ ಸೂಕ್ತ ನಿರ್ದೇಶನ ದೊರೆಯುವ ಮೊದಲೇ** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 07 ಸಿಬ್ಬಂದಿಗಳ ಮೃತಾವಲಂಬಿತರಿಗೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ 04 ಸಿಬ್ಬಂದಿಗಳ ಮೃತಾವಲಂಬಿತರಿಗೆ ತಲಾ ರೂ.30 ಲಕ್ಷಗಳಂತೆ ನಿಗಮಗಳ ಹಂತದಲ್ಲಿ ಪರಿಹಾರವನ್ನು ಪಾವತಿಸಲಾಗಿತ್ತು.

ಮುಂದುವರೆದು, **ಆರ್ಥಿಕ ಇಲಾಖೆಯು** ಆದೇಶ ಸಂಖ್ಯೆ:ಆಇ:114:ವೆಚ್ಚ 11/2020, ದಿನಾಂಕ:02.05.2020 ರಲ್ಲಿ ಸಾರಿಗೆ ನಿಗಮಗಳ ನೌಕರರನ್ನು ಕೋವಿಡ್ ವಾರಿಯರ್ ಎಂದು **ಪರಿಗಣಿಸದ ಕಾರಣ** ನಿಗಮಗಳ ಉಳಿದ ಮೃತಾವಲಂಭಿತರಿಗೆ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.

ಪ್ರಸ್ತುತ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಮೃತರಾದ ಸಿಬ್ಬಂದಿಗಳ ಅವಲಂಭಿತರಿಗೆ ಪರಿಹಾರ ಕೋರಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ :16157/2022ರನ್ವಯ ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಅಂತಿಮ ನಿರ್ಣಯವನ್ನು ನಿರೀಕ್ಷಿಸಲಾಗಿದೆ.

ಸಂಖ್ಯೆ: ಟಿಡಿ 108 ಟಿಸಿಕ್ಯೂ 2026

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು